RISE IN PRICES OF FOODGRAINS

319. Sri T. R. SHAMANNA (Fort):—

Will the Minister for Food and Forests be pleased to state:—

(*a*) whether it has come to the notice of the Government that the production of foodgrains this year is very much better than last year;

(*b*) whether the Government is aware that inspite of production of foodstuffs in larg r quantity the prices of food articles are going up day by day;

(*c*) the target fixed for collecting levy of paddy and other grains during the years 1970 to 1973 and 1973-74;

(*d*) the quantity of levy of paddy and other foodgrains collected so far;

(*e*) the steps taken by the Government to bring down the prices of foodgrains ?

Sri K. H. PATIL (Minister for Food and Forests):—

(*a*) Yes.

(*b*) Yes.

(*c*) and (*d*):—

In tonnes

Year	Paddy		Jowar		Ragi	
	Target	Procured	Target	Procured	Target	Procured
1970-71	77,600	20,224	4,800	1,728	—	—
1971-72	1,11,030	62,388	5,391	26,674	—	—
1972-73	1,50,275	76,756	7,350	619	—	—
1973-74 (Including open market purchases by Co-operatives)	3,50,000	1,41,150	65,000	2,057	25,000	242

(*e*) The rate of growers levy has been increased to enable Government to procure larger quantities of foodgrains. In addition purchases are also being made in the open market through selected co-operatives. These measures are intended to build up sizeable stocks under Government control for feeding the public distribution system.

Informal Rationing has been extended to Mangalore city from 1-3-1974 and will be extended in stages to Hubli-Dharwar, Gulbarga, Belgaum and Mysore. The scale of rations in the informal rationing areas has been increased to 7 Kgs. of foodgrains per head per month. The requirements of the vulnerable sections of the community in the other areas will be met by larger allotments out of Goverment stocks.

Vigorous measures have been employed to locate hoarded stocks and take them over to Government under the appropriate provisions of law.

All these measures are aimed at having an effective control over the price situation.

ಶ್ರೀ ಟಿ. ಆರ್. ಶಾಮಣ್ಣ:—ಸ್ವಾಮಿ, ತಾವು ಕೊಟ್ಟಿರತಕ್ಕಂಥ ಉತ್ತರ ನೋಡಿದರೆ ೪–೫ ವರ್ಷ ದಿಂದಲೂ ಬೆಳೆ ಜಾಸ್ತಿಯಾಗಿದೆ. ಹಾಗಿದ್ದರೂ ಕೂಡ ಅನೇಕರು ಡಿಸ್ಟ್ರಿಕ್ಟಿನಿಂದ ಡಿಸ್ಟ್ರಿಕ್ಟಿಗೆ ಕಳ್ಳ ಸಾಗಾಣಿಕೆ ಯಿಂದ ತರಿಸುತ್ತಿದ್ದಾರೆ. ಆದುದರಿಂದ ಅಕ್ಕಿ ಬೆಲೆ ಇಳಿದಿಲ್ಲ. ಅಲ್ಲದೆ ಮುಖ್ಯವಾಗಿ ರೇಷನ್ನಿನಲ್ಲಿ ಕೊಡತಕ್ಕಂಥ ಅಕ್ಕಿ ಸಾಲದೇ ಹೋದುದರಿಂದ ಡಿಸ್ಟ್ರಿಕ್ಟ ಮೂವಮೆಂಟ್ ತೆಗೆದರೆ ಬೆಲೆ ಕಡಿಮೆಯಾಗಬಹುದು. ಅದನ್ನು ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ:— ಸದ್ಯಕ್ಕೆ ಆ ಆಲೋಚನೆ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ:—ರೇಷನ್ ಷಾಪಿನಲ್ಲಿ ಹೋದ ವರ್ಷ ಒಂದು ಕೆ. ಜಿ. ಅಕ್ಕಿಗೆ ರೂಪಾಯಿ ೧–೧೦ ಇದ್ದದ್ದು ಈ ವರ್ಷ ರೂಪಾಯಿ ೧–೬೫ ಮಾಡಿದ್ದೀರಿ. ಆದುದರಿಂದ ಈಗಲಾದರೂ ರೇಷನ್ ಕಾರ್ಡ ಹೋಲ್ಡರ್ಸಗೆ ಉತ್ತಮವಾದ ಅಕ್ಕಿಯನ್ನು ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ : —ಈಗಾಗಲೇ ಹೋದ ವರ್ಷಕ್ಕಿಂತ ಉತ್ತಮವಾದ ಅಕ್ಕಿಯನ್ನು ಕೊಟ್ಟಿದ್ದೇವೆ. ಮತ್ತು ಮುಂದೆ ಇನ್ನೂ ಹೆಚ್ಚು ಉತ್ತಮವಾದ ಅಕ್ಕಿಯನ್ನು ಕೊಡುವುದಕ್ಕೆ ಪ್ರಯತ್ನ ನಡೆದಿದೆ.

ಶ್ರೀ ಕೆ. ಎಂ. ನಾಗಣ್ಣ :—ಸ್ವಾಮಿ, ರೇಷನ್ ಕಾರ್ಡ ಹೋಲ್ಡರ್ಸಗೆ ಈಗ ಏನು ಅಕ್ಕಿ ಕೊಡುತ್ತಿದ್ದೀರಿ. ಅದಕ್ಕಿಂತ ಸ್ವಲ್ಪ ಹೆಚ್ಚು ಅಕ್ಕಿಯನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ :—ಹೆಚ್ಚು ಅಕ್ಕಿ ಕೊಡಬೇಕು ಎನ್ನುವುದು ಇಡೆ. ಆದರೆ ಈ ವರ್ಷದ ಆಹಾರದ ಸಂಗ್ರಹಣೆ ನೋಡಿಕೊಂಡು ಎಲ್ಲಾ ಕಡೆಯೂ ಇನ್‌ಫಾರ್ಮಲ್ ರೇಷನ್ ತರಬೇಕು ಎನ್ನುವ ದೃಷ್ಟಿಯಿಂದ ಹೆಚ್ಚು ಅಕ್ಕಿಯನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಆದರೆ ಮಾರ್ಕೆಟ್ ಧಾರಣೆ ಕಡಿಮೆ ಆಗುವುದಕ್ಕೆ ಏನೆಲ್ಲರೂ ಪ್ರಯತ್ನ ಮಾಡಬೇಕು.

ಶ್ರೀ ಕೆ. ಆರ್. ಶ್ರೀನಿವಾಸ ನಾಯ್ಡು :—ಆಹಾರದ ಬೆಲೆಗಳು ಕಾಲ ಕಾಲಕ್ಕೆ ಏರದೇ ಇರುವ ದೃಷ್ಟಿಯಿಂದ, ಜನಗಳಿಗೆ ಪದಾರ್ಥಗಳು ಸುಲಭವಾಗಿ ಸಿಕ್ಕಬೇಕು ಎನ್ನುವ ದೃಷ್ಟಿಯಿಂದ ಯು. ಕೆ. ನಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಪ್ರೈಸಕಮ್ ಇನ್‌ಕಂ ಬೋರ್ಡ ಅಂತ ಇದೆ. ಅಂತಹ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಯೋಚನೆ ಮಾಡಿ ಜನಗಳಿಗೆ ಸುಲಭದರದಲ್ಲಿ ಪದಾರ್ಥಗಳು ಸಿಕ್ಕುವಂತೆ ಮಾಡಲು ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ :—ಸುಲಭದರದಲ್ಲಿ ಪದಾರ್ಥಗಳು ಸಿಕ್ಕುವುದಕ್ಕೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಬಹುದು. ಆದರೆ ಯು. ಕೆ. ನಲ್ಲಿ ಬೋರ್ಡ ರಚನೆ ಇರುವ ಹಾಗೆ ಇಲ್ಲಿ ಮಾಡಬೇಕು ಎಂದರೆ ನಮ್ಮ ದೇಶದಲ್ಲಿ ಅಷ್ಟು ಹೊಂದಾಣಿಕೆ ಮಾಡಿಕೊಂಡು ಹೋಗುವ ಜನ ಕಡಿಮೆ.

ಶ್ರೀ ಎಂ. ಎಸ್. ಕೃಷ್ಣನ್ :—ತಾವು (ಉ) ಗೆ ಉತ್ತರವಾಗಿ ಹೇಳಿದ್ದೀರಿ. ಉಗ್ರ ಕ್ರಮಕ್ಕೆಕೊಳ್ಳುವ ಮೂಲಕ ಬಚ್ಚಿಟ್ಟ ಆಹಾರ ಧಾನ್ಯಗಳನ್ನು ಕಂಡುಹಿಡಿದು ಅವುಗಳನ್ನು ಕಾನೂನಿನ ಸೂಕ್ತ ಅವಕಾಶಗಳ ಮೇರೆಗೆ ಸರಕಾರದವರು ವಶಪಡಿಸಿಕೊಳ್ಳುವರು ಎಂದು. ಇದಕ್ಕೆ ನಾನು ಕೇಳುವುದು ಏನೆಂದರೆ ಬಚ್ಚಿಟ್ಟ ಆಹಾರ ಪದಾರ್ಥಗಳನ್ನು ನೀವು ಮಂತ್ರಿಯಾದ ಮೇಲೆ ಒಂದು ವರ್ಷದಲ್ಲಿ ಎಷ್ಟು ವಶಪಡಿಸಿಕೊಂಡಿದ್ದೀರಿ ಮತ್ತು ಎಷ್ಟು ಜನರ ಮೇಲೆ ಕೇಸು ಹಾಕಿದ್ದೀರಿ ಮತ್ತು ಎಷ್ಟು ಜನರಿಗೆ ಶಿಕ್ಷೆ ಆಗಿದೆ ?

ಶ್ರೀ ಕೆ. ಎಚ್. ಪಾಟೀಲ :—ಸುಮಾರು ೨೦–೨೫ ಟನ್ ಅಷ್ಟು ನಾವು ಬಹಿರಂಗವಾಗಿ ತೆಗೆದಿರ ಬಹುದು. ಅದರಲ್ಲಿ ಡೆಪ್ಯುಟಿ ಕಮೀಷನರಲ್ಲಿ ಕೆಲವು ಇವೆ. ಅವರು ಕೆಲವು ಕೇಸುಗಳನ್ನು ಹಾಕಿದ್ದಾರೆ. ಮತ್ತೊಂದು ಪ್ರಶ್ನೆ ಕೇಳಿದರೆ ಅದರ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಈಗಾಗಲೇ ತಿಳಿದಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕೆ. ಜಿ. ಅಕ್ಕಿಗೆ ೨–೫೦, ೩ ರೂಪಾಯಿ ಇದೆ. ಅದೇ ರೀತಿ ಶಿವಮೊಗ್ಗ ಮತ್ತು ಇನ್ನೂ ಕೆಲವಾರು ಜಿಲ್ಲೆಗಳಲ್ಲಿ ೨–೦೦, ೨–೫೦ ರೂಪಾಯಿಯವರೆಗೂ ಅಕ್ಕಿ ದರ ಇದೆ. ಈ ರೀತಿ ಒಂದು ಜಿಲ್ಲೆಯಿಂದ ಒಂದು ಜಿಲ್ಲೆಗೆ ಅಕ್ಕಿ ದರ ವ್ಯತ್ಯಾಸ ಕಾಣುತ್ತಾ ಇರುವುದು ಏತಕ್ಕೆಂದರೆ ಇದಕ್ಕೆ ಹೊರ್ಡರ್ಸ ಅವರೇ ಕಾರಣರು. ಅದೂ ಅಲ್ಲದೆ ಈ ಬಗ್ಗೆ ಎಷ್ಟೋ ಹೋರ್ಡರ್ಸನ್ನು ಸೀಸ್ ಮಾಡಿದ್ದೀರಿ. ಆದರೂ ಅಕ್ಕಿ ಬೆಲೆ ಇಳಿದಿಲ್ಲ. ಇದಕ್ಕೆ ಮುಂದೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ :—ಈಗಾಗಲೇ ನಾವು ಕೆಲವರನ್ನು ಹಿಡಿದಿದ್ದೇವೆ. ಆದರೂ ಹೋರ್ಡರ್ ಸಂಖ್ಯೆ ಜಾಸ್ತಿ ಇದೆ. ಇದು ಬರೇ ವ್ಯಾಪಾರಸ್ಥರೇ ಮಾಡುತ್ತಾರೆ ಅಂತಲ್ಲ. ಕನ್ಸ್ಯೂಮರ್ಸ್, ರೈತರು ಎಲ್ಲರೂ ಹೋರ್ಡ ಮಾಡುತ್ತಾರೆ. ಆದುದರಿಂದ ಈ ಹೋರ್ಡರ್‌ನ್ನು ಹೋರ್ಡ ಮಾಡಿರುವುದನ್ನು ಹೊರಗೆ ತೆಗೆಯಲಿಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು.

ಶ್ರೀ ಆರ್. ಎಸ್. ಪಾಟೀಲ :—ಈಗ ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ, ಬೆಳಗಾಂವಿ ಹಾಗೂ ಮೈಸೂರು ಪಟ್ಟಣಗಳಲ್ಲಿ ರೇಷನಿಂಗ್ ಪದ್ಧತಿಯನ್ನು ಹಂತಹಂತವಾಗಿ ವಿಸ್ತರಿಸುತ್ತೇವೆ ಎಂದು ಹೇಳುತ್ತೀರಿ. ಸಾಧಾರಣವಾಗಿ ಈ ಕೆಲಸ ಆಗಬೇಕಾದರೆ ಇನ್ನೂ ೧–೨ ತಿಂಗಳು ಆಗುತ್ತದೆ. ಈಗ ಹೊರಗಿನಿಂದ ಅಕ್ಕಿ ಬಾರದೇ ಇರುವುದರಿಂದ ಅಕ್ಕಿ ದರ ಜಾಸ್ತಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಈ ದರವನ್ನು ಇಳಿಸುವುದರ ಸಲುವಾಗಿ ಖಾಸಗೀ ವ್ಯಾಪಾರಸ್ಥರಿಗೆ ಯಾರಿಗಾದರೂ ಪರವಾನೆ ಕೊಟ್ಟು ಒಂದು ರೇಟನ್ನು ನಿಗದಿಮಾಡಿ ಮಾರುವ ಒಂದು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ :—ರಾಯಚೂರು, ಶಿವಮೊಗ್ಗದಿಂದ ಬೆಳಗಾಂವಿಗೆ ಅಕ್ಕಿ ಕಳುಹಿಸಬೇಕು ಎಂದು ನಾವು ತಿಳಿಸಿದ್ದೇವೆ. ಮೊನ್ನೆ ತಾನೇ ಯಾರೋ ಒಬ್ಬರು ವ್ಯಾಪಾರಸ್ಥರು ಬಂದು ಕೇಳಿದರು. ನಮಗೆ ೪೦ ಪರ್ಸೆಂಟ್ ಲೆವಿ ಕೊಡುವುದಾದರೆ ನೀವು ಅಲ್ಲಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಬಹುದು ಎಂದು ಡೆಪ್ಯುಟಿ ಕಮೀಷನರು ಹೇಳಿದ್ದಾರೆ ಎಂದು. ಅದು ಸರಿಯಾದುದೇ. ಕಡಿಮೆ ಬೆಲೆಯಲ್ಲೇ ಅಕ್ಕಿಯನ್ನು ಮಾರಾಟ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ಆ ರೀತಿ ಲೆವಿ ಕೊಟ್ಟು ಕಡಿಮೆ ಬೆಲೆಗೆ ಮಾರುವುದೇ ನಮ್ಮ ಉದ್ದೇಶ.

ಶ್ರೀ ಸಿ. ಬೈರೇಗೌಡ.—ಇವತ್ತು ಬೇರೆ ಕಡೆ ಅಂತರಜಿಲ್ಲಾ ಸಾಗಾಣಿಕೆ ನಿರ್ಬಂಧವನ್ನು ತೆಗೆದಿರುವುದರಿಂದ ಗೋದಿ ಒಂದು ಕ್ವಿಂಟಾಲಿಗೆ ೧೦೦-೨೦೦ ರೂಪಾಯಿ ಕಡಿಮೆಯಾಗಿದೆಯೆಂದು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಈಗ ಒಂದು ಅನುಭವ ಬಂದಿದೆ. ಈ ಅನುಭವವನ್ನನುಸರಿಸಿ ನಮ್ಮ ರಾಜ್ಯ ಮಟ್ಟದಲ್ಲಿ ಅಂತರಜಿಲ್ಲಾ ಸಾಗಾಣಿಕೆ ನಿರ್ಬಂಧವನ್ನು ರದ್ದುಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ಅನುಭವ ಇರಲಿ, ಇಲ್ಲದೇ ಇರಲಿ, ನನ್ನ ಉದ್ದೇಶ ಹೀಗಿದೆ. ಸದ್ಯದ ಪರಿಸ್ಥಿತಿಯನ್ನು ಗಮನಿಸಿ, ನಮ್ಮ ಪ್ರೊಕ್ಯೂರಮೆಂಟ ಮುಟ್ಟಿದ ವಿನಹ ಯಾವುದೇ ರೀತಿಯಿಂದ ವಿಚಾರ ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ, ಶಿವಮೊಗ್ಗ ಜಿಲ್ಲೆಯಲ್ಲೇ ಅಕ್ಕಿಯ ಧಾರಣೆ ಗಗನಕ್ಕೆ ಏರಿರುವಾಗ, ತೆಗೆದರೂ ಒಂದೇ, ತೆಗೆಯದಿದ್ದರೂ ಒಂದೆ. ಆದುದರಿಂದ ಅದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡೋಣ. ತಮ್ಮ ಸಹಾಯವನ್ನು ಅಗತ್ಯ ಇದ್ದಲ್ಲಿ ಅಪೇಕ್ಷಿಸುತ್ತೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಬೆಳಗಾಂನಲ್ಲಿ ಸರಿಯಾದ ರೀತಿಯಲ್ಲಿ ಎಷ್ಟು ಪ್ರಮಾಣ ತೆಗೆದು ಕೊಂಡು ಹೋಗುವುದಕ್ಕೆ ತಿಳಿಸಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ.—೨೫ ಪರ್ಸೆಂಟ್ ತೆಗೆದುಕೊಂಡು ಹೋಗಬಹುದು.

ಶ್ರೀ ಎಸ್. ಬಂಗಾರಪ್ಪ.—ಟಾರ್ಗೆಟ ಫಿಕ್ಸ್ಡ್ ಫಾರ್ ಜವಾರ ೬೫,೦೦೦ ಟನ್ ಇದೆ. ಪ್ರೊಕ್ಯೂರ ಆದದ್ದು ೨,೦೫೭ ಟನ್ ಇದೆ. ಟಾರ್ಗೆಟ ಪ್ರೊಕ್ಯೂರಮೆಂಟಿಗಿಂತ ಕಡಿಮೆ ಇದೆ. ಇದಕ್ಕೆ ಕಾರಣ ಏನು ?

ಶ್ರೀ ಕೆ. ಎಚ್. ಪಾಟೀಲ.—ಈಗ ಸುರುವಾಗಿದೆ. ಬಹುಶಃ ೬೫,೦೦೦ ಟನ್ ಸಂಗ್ರಹ ಮಾಡ ಬಹುದು. ಹೈಬ್ರಿಡ್ ಜವಾರ ಚಾಲು ಆಗಿಲ್ಲ, ರಬಿ ಜವಾರ ಚಾಲು ಮಾಡಿದ್ದು ಫೆಬ್ರುವರಿಯಿಂದ ಈಚೆಗೆ. ಬಹುತೇಕ ಮೇ, ಜೂನ ಒಳಗೆ ಪೂರೈಸಬಹುದು. ಸ್ವಲ್ಪ ಹೆಚ್ಚು ಕಡಿಮೆ ಆಗಬಹುದು.

ಶ್ರೀ ಬಿ. ವಿ. ಕಕ್ಕಿಲಾಯ. ಟಾರ್ಗೆಟ ಮತ್ತು ಪ್ರೊಕ್ಯೂರಮೆಂಟ ನೋಡಿದರೆ, ೫೦ ಪರ್ಸೆಂಟಗಿಂತ ಕಡಿಮೆ ಇದೆ. ಆದುದರಿಂದ ಪ್ರೊಕ್ಯೂರಮೆಂಟ ತಮ್ಮ ಟಾರ್ಗೆಟ ಗುರಿ ಮುಟ್ಟುವ ಹಾಗೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ಭತ್ತ ಒಂದು ಲಕ್ಷ ಟನ್ ಚಿಲ್ಲರೆ ಖರೀದಿ ಮಾಡಿರುವುದನ್ನು ಉತ್ತರದಲ್ಲಿ ಕೊಟ್ಟಿದೆ. ನಿಜವಾಗಿ ೨ ಲಕ್ಷ ೫೦ ಸಾವಿರ ಟನ್ ಖರೀದಿ ಮಾಡಬೇಕಾಗಿತ್ತು. ಈಗಾಗಲೇ ೧ ಲಕ್ಷ ೪೧ ಸಾವಿರ ಟನ್ ಮುಟ್ಟಿದ್ದೇವೆ. ನಾನು ಆಗಲೇ ಹೇಳಿದ ಹಾಗೆ ೨೫,೦೦೦ ಟನ್ ಸೀಸ್ ಮಾಡಿದ ಸ್ಟಾಕ್ಸ ಬರುತ್ತದೆ. ೧,೭೫,೦೦೦ ಟನ್ ಬಂದಿದೆ. ಉಳಿದದ್ದನ್ನು ಇನ್ನು ಒಂದು ತಿಂಗಳು ಅಥವಾ ಎರಡು ತಿಂಗಳೊಳಗೆ ಟ್ರಾನ್ಸಪೋರ್ಟ ಲೆವಿ ಮತ್ತು ಮಿಲ್ ಲೆವಿಯಿಂದ ಕೂಡಿಸಬಹುದು ಎಂದು ಆಶಯ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ —ಅನೇಕ ರೇಷನ್ ಅಂಗಡಿಗಳಲ್ಲಿ ರೇಷನ್ ಕ್ರಮವಾಗಿ ಸಿಕ್ಕುತ್ತಾ ಇಲ್ಲ. ಒಂದೊಂದು ಸಾರಿ ಒಟ್ಟೊಟ್ಟಿಗೆ ಬರುತ್ತದೆ. ಜನರು ಕಾರ್ಡ ತೆಗೆದುಕೊಂಡು ಹೋಗಿ, ಬ್ಯಾಗ ತೆಗೆದು ಕೊಂಡು ಹೋಗಿ ವಾಪಸ್ ಬರುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ? ರೇಷನ್ ಕ್ರಮವಾಗಿ ಸಪ್ಲೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ಮಾನ್ಯ ಶಾಮಣ್ಣನವರು ಯಾವಾಗಿನ ತಮ್ಮ ಅನುಭವವನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ. ಸ್ಟಾಕ ಹೆಚ್ಚು ಉಳಿದಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಯಾವ ಷಾಪಿನಲ್ಲಿ ರೇಷನ್ ಇಲ್ಲ ಎಂದು ಹೇಳಿರುವುದನ್ನು ನನ್ನ ಗಮನಕ್ಕೆ ತಂದರೆ, ಆ ಷಾಪನ್ನು ಮುಚ್ಚಿಸುತ್ತೇನೆ. ಸದಾಕಾಲ ಜನರಿಗೆ ಸಿಗುವಂತೆ ಒಂದು ತಿಂಗಳು ಸ್ಟಾಕ ತರಿಸಿ ಇಟ್ಟಿದ್ದೇವೆ. ಅಂಗಡಿಯವರಿಗೆ ರೇಷನ್ನನ್ನು ಹಂತಹಂತವಾಗಿ ತೆಗೆದುಕೊಂಡು ಹೋಗಿ ಎಂದು ಹೇಳಿದ್ದೇವೆ. ಯಾವ ಕಾಲಕ್ಕೆ ಹೋದರೂ ಕಾರ್ಡು ದಾರರಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶ ಇದೆ. ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡ ಷಾಪನ್ನು ಗಮನಕ್ಕೆ ತಂದುಕೊಟ್ಟರೆ ಆ ಷಾಪನ್ನು ಬಂದ ಮಾಪುತ್ತೇವೆ.

SHORT NOTICE QUESTION AND ANSWER

ESTABLISHMENT OF POST GRADUATE CENTRE IN ENGINEERING

4. Sri KAGODU THIMMAPPA (Sagar).—

Will the Minister for Education be pleased to state :—

(*a*) whether the Karnataka University has decided to establish a Post Graduate Centre in Engineering in Sandur Taluk; if so, when the decision was taken ;

(*b*) whether the Karnataka University had asked for grant of land for this Post Graduate Centre; the place and the extent of land asked for;

(*c*) when the site has been handed over to the University?

Sri M. MALLIKARJUNSWAMY (Minister for Education).—

(*a*) Yes. Syndicate took a decision on 30-4-1973.

(*b*) Yes. About 1,500 to 2,000 acres of land at Nandihalli Village in Sandur Taluk had been asked for.

(*c*) A land measuring 242.65 acres has been handed over on 29-1-1974.